02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 238/2018**

| | |
|---|---|
| ಹೆಸರುಃ ಸಮೀವುಲ್ಲಾ ಷರೀಫ್ | ಚಾಸಾಃ 1 |
| ತಂದೆಯ ಹೆಸರುಃ ಷಫಿ ವುಲ್ಲಾ ಷರೀಫ್ | ಪ್ರಾಸಾ: 3 |
| ವಯಸ್ಸುಃ 38 ವರ್ಷ | |
| ಉದ್ಯೋಗಃ ಚಾಲಕ | |
| ವಾಸ ಸ್ಥಳಃ ನಲ್ಲೂರು ಕ್ಯಾಂಪ್ , ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 03-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಾನು 2017 ರಂದು ನಮ್ಮ ಮನೆಯಲ್ಲಿ ಆದ ಕಳ್ಳತನದ ವಿಚಾರವಾಗಿ ಮಾಡಿರುತ್ತೇನೆ.

2017 ನೇ ಇಸ್ವಿಯಲ್ಲಿ ನಮ್ಮ ಮಗುವಿಗೆ ಅನಾರೋಗ್ಯವಿದ್ದ ಕಾರಣ ನಾನು ಶಿವಮೊಗ್ಗ ಆಸ್ಪತ್ರೆಯಲ್ಲಿ ಇದ್ದು ಚಿಕಿತ್ಸೆ ಕೊಡಿಸುತ್ತಿದ್ದು. ನಮ್ಮ ಮನೆಯ ಪಕ್ಕದಲ್ಲಿರುವ ನಮ್ಮ ಅತ್ತೆಯವರು ನನಗೆ ಫೋನ್ ಕರೆ ಮಾಡಿ ಮನೆ ಬಾಗಿಲು ತೆರೆದಿರುವ ವಿಚಾರ ತಿಳಿಸಿರುತ್ತಾರೆ. ನಂತರ ನಾವು ಮಾರನೇ ದಿನ ಬೆಳಿಗ್ಗೆ ನಮ್ಮ ಮನೆಗೆ ಬಂದು ನೋಡಲಾಗಿ ಮನೆಯ ವಸ್ತುಗಳು ಎಲ್ಲಾ ಚೆಲ್ಲಾಪಿಲ್ಲಿಯಾಗಿದ್ದು ಬೀರುವಿನ ಬಾಗಿಲು ತೆಗೆದಿದ್ದು ಅದರಲ್ಲಿನ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿರುತ್ತದೆ. ಬೀರುವಿನಲ್ಲಿದ್ದ 3 ತೊಲ ತೂಕದ ಸರ ಮತ್ತು ಜುಮ್ಕಿ ಮತ್ತು 80 ಸಾವಿರ ನಗದು ಹಣ ಕಳ್ಳತನವಾಗಿರುತ್ತದೆ. ಸದರಿ ವಿಚಾರವಾಗಿ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸರು ನಾನು ತೋರಿಸಿದ ಸ್ದಳದಲ್ಲಿ ನನ್ನ ಸಮಕ್ಷಮ ಮಹಜರು ಕ್ರಮ ಜರುಗಿಸಿರುತ್ತಾರೆ, ಸದರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೇನೆ. ಸದರಿ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸದರಿ ನಿಪಿ-4 ನ್ನು ನಿಪಿ-3 ರ ಸಮಯಕ್ಕೆ ತೆಗೆಯಲಾಯಿತು. ನಿಪಿ-4 ರಲ್ಲಿ ಚಾಸಾ-2 ಮತ್ತು 3 ರವರು ಇದ್ದಾರೆ.

ನಮ್ಮ ಮನೆಯಲ್ಲಾದ ಕಳ್ಳತನ ಯಾರು ಮಾಡಿದರು ಎಂಬ ಬಗ್ಗೆ ನಾನು ಪೊಲಿಸರಿಂದ ಕೇಳಿ ತಿಳಿದುಕೊಂಡಿಲ್ಲ.

ಪೊಲೀಸರು ಆರೋಪಿತರನ್ನು ನಮ್ಮ ಮನೆ ಬಳಿ ಕರೆದುಕೊಂಡು ಬಂದಾಗ ನಾನು ಶಿವಮೊಗ್ಗದಲ್ಲಿದ್ದೆನು.

( ಮಾನ್ಯ ಸಹಾಯಕ ಸರ್ಕಾರಿ ಅಭಿಯೇಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

ಸಾಕ್ಷಿಗೆ ದಿನಾಂಕಃ 11-10-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನ್ನ ಮನೆಯಲ್ಲಿ ಕಳುವಾದ ವಸ್ತುಗಳು ಈಗ ನನ್ನ ಬಳಿಯೇ ಇದೆ. ಸಾಕ್ಷಿ ಈಗ ತಾನು ತಂದಿರುವ ಒಂದು ನೆಕ್ಲೇಸ್ ಮತ್ತು ಒಂದು ಜೊತೆ ಜುಮ್ಕಿಯನ್ನು ತಂದಿದ್ದು ಸದರಿ ನೆಕ್ಲೇಸ್ ಮತ್ತು ಒಂದು ಜೊತೆ ಜುಮ್ಕಿಯನ್ನು ದೋಷಾರೋಪಣಾ ಪಟ್ಟಿಯ ಪುಟ ಸಂಖ್ಯೆ 61 ಮತ್ತು 64 ರಲ್ಲಿ ಹಾಕಿರುವ ಫೋಟೋದೊಂದಿಗೆ ನ್ಯಾಯಾಲಯ ಪರಿಶೀಲಿಸಿ ನೋಡಲಾಗಿ ಸದರಿ ದೋಷಾರೋಪಣಾ ಪಟ್ಟಿಯ ಫೋಟೋದಲ್ಲಿನ ಒಡವೆಗೂ ಮತ್ತು ಪ್ರಸ್ತುತ ತಾನು ತಂದಿರುವ ಒಡವೆಗೂ ಒಂದಕ್ಕೊಂದು ತಾಳೆಯಿರುವುದಿಲ್ಲ ಎಂಬುದನ್ನುಗಮನಿಸಿರುತ್ತದೆ.

ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇದ್ದೆನೆ.ಸದರಿ ಫೋಟೋವನ್ನು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಅಭೀರಕ್ಷೆಗೆ ಆಭರಣಗಳನ್ನು ಪಡೆಯುವಾಗ ತೆಗೆದ ಫೋಟೋವಾಗಿರುತ್ತದೆ. ಕಳುವಾದ ವಿಚಾರವಾಗಿ ಸದರಿ ಕಳ್ಳತನವನ್ನು ಮಾಡಿದ್ದು ಯಾರು ಎಂಬ ಬಗ್ಗೆನಾನು ತಿಳಿದುಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಮರು ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

<u>**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**</u>

ದಿಃ 05-07-2017 ರಂದು ನನ್ನ ಮನೆಯಲ್ಲಿ ದಿಃ 28-02-2017 ರಂದು ಕಳ್ಳತನ ಮಾಡಿದ ವ್ಯಕ್ತಿಗಳ ಹೆಸರು ಅಫ್ರೋಜ್ ಅಹಮ್ಮದ್, ಕುಮಾರ ಮತ್ತು ನಾಗೇಂದ್ರ ಎಂದು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳ ಹೆಸರು ಅಫ್ರೋಜ್ ಅಹಮ್ಮದ್, ಕುಮಾರ ಮತ್ತು ನಾಗೇಂದ್ರ ಎಂದರೆ ನನಗೆ ಗೊತ್ತಿಲ್ಲ.

<u>**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಟಿ ವಕೀಲರಿಂದಃ**</u>

ಕಳುವಾದ ದಿನ ನಾನು ನನ್ನಮಗನ ಚಿಕಿತ್ಸೆಗಾರಿಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ವಿಚಾರದ ಬಗ್ಗೆ ನಿಪಿ-2 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ನಾನು ಸದರಿ ಕಳುವಾದ ದಿನ ಯಾವುದೇ ಆಸ್ಪತ್ರೆಗೆ ಹೋಗದೆ ಇದ್ದರು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋದ ದಿನಾಂಕ, ತಿಂಗಳು ನನಗೆ ಹೇಳಲಾಗುವುದಿಲ್ಲ. ನನ್ನ ಮನೆಯಲ್ಲಿ ಕಳ್ಳತನವಾದ ವಿಷಯವನ್ನು ನನ್ನ ಅಣ್ಣ ಪೋನ್ ಕರೆ ಮಾಡಿ ನನಗೆ ತಿಳಿಸಿದರು ಎಂದು ನಾನು ನನ್ನ ನಿಪಿ-2 ರಲ್ಲಿ ಹೇಳಿದ್ಧು ಸದರಿ ನಮ್ಮ ಅಣ್ಣನ ಪೋನ್ ನಂಬರ್ ನನಗೆ ಹೇಳಲಾಗುವುದಿಲ್ಲ. ಕಳುವಾದ 60 ಸಾವಿರ ಹಣದ ಮುಖ ಬೆಲೆಯನ್ನು ನನಗೆ ಹೇಳಲಾಗುವುದಿಲ್ಲ. ಹಾಗಾಗಿ ನನಗೆ ಕಳ್ಳತನವಾದ ಹಣದ ಮುಖ ಬೆಲೆಯನ್ನು ಹೇಳಲಾಗದ ಕಾರಣ ನನ್ನ ಮನೆಯಲ್ಲಿ ಯಾವುದೇ ಕಳುವು ಆಗಿಲ್ಲ ಎಂದರೆ ಸರಿಯಲ್ಲ. ಕಳುವಾದ ಚಿನ್ನಾಭರಣಗಳ ಕುರಿತು ಯಾವುದೇ ಬಿಲ್ ಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಕಳುವಾದವಸ್ತುಗಳು ನಮ್ಮವೇ ಎಂದು ತೋರಿಸಲು ಯಾವುದೇ ಬಿಲ್ಲು ಗಳು ನಮ್ಮ ಬಳಿ ಇಲ್ಲ. ಹಾಗಾಗಿ ನನ್ನ ಮನೆಯಲ್ಲಿ ಯಾವುದೇ ಕಳ್ಳತನವಾಗದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಪೊಲೀಸರು ನಮ್ಮ ಮನೆಗೆ ಬಂದಂತಹ ದಿನಾಂಕ, ತಿಂಗಳು, ಇಸ್ವಿ ಹೇಳಿ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ನಿಪಿ-3 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

<u>**ಮರುವಿಚಾರಣೆಃ ಇರುವುದಿಲ್ಲ.**</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 238/2018**

| | |
|---|---|
| ಹೆಸರುಃ ಅಬ್ದುಲ್ ಖದೀರ್ | ಚಾಸಾಃ 4 |
| ತಂದೆಯ ಹೆಸರುಃ ಅಬ್ದುಲ್ ಖುದ್ದು ಸಾಬ್ | ಪ್ರಾಸಾ: 2 |
| ವಯಸ್ಸುಃ 44 ವರ್ಷ | |
| ಉದ್ಯೋಗಃ ಟಿಂಬರ್ ವ್ಯಾಪಾರ | |
| ವಾಸ ಸ್ಥಳಃ ಚನ್ನಗಿರಿ | |
| ಸಾಕ್ಷಿಗೆ ದಿನಾಂಕಃ 19-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ಅಮಾನತು ಪಂಚನಾಮೆಯ ದೃಢೀಕೃತ ನಕಲಾಗಿದ್ದು ಅದನ್ನು ನಿಪಿ-1 ಎಂದು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ, ಯಾವ ಕಾರಣಕ್ಕಾಗಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ, ನಾನು ಯಾವುದೋ ಕೆಲಸದ ಮೇರೆಗೆ ಪೊಲೀಸ್ ಠಾಣೆಗೆ ಬಂದಿದ್ದಾಗ ಪೊಲೀಸರ ಸೂಚನೆ ಮೇರೆಗೆ ಸದರಿ ದಾಖಲೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ-1 ಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಮಹಜರಿಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಮಹಜರನ್ನು ನೋಡಲಾಗಿ ಸಾಕ್ಷಿಯು ಮಹಜರಿಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ28-03-2017 ರಂದು ಚಾಸಾ-15 ರವರು ನನ್ನನ್ನು ಹಾಗೂ ಚಾಸಾ-5 ರವರ ಸಮಕ್ಷಮ ನಿಪಿ-1 ರಲ್ಲಿ ನಮೂದಿಸಿರುವ ವಾಹನಗಳನ್ನು ಮತ್ತು ಬಂಗಾರದ ಒಡವೆಗಳನ್ನು ಅಮಾನತು ಪಂಚನಾಮೆ ಜರುಗಿಸಲು ಪಂಚರಾಗಿ ಸಹಕರಿಸಲು ಕೋರಿದರು ಎಂದರೆ ಸರಿಯಲ್ಲ. ಸದರಿ ನಿಪಿ-1 ನ್ನು ಅದೇ ದಿನ ಮದಾಹ್ನ 3.00 ರವರೆಗೆ ಜರುಗಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ.

ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**